ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೧೫ರ ವರೆಗೆ

ಅಧ್ಯಕ್ಷರು.—''ಖಂಡ ೨ ರಿಂದ ೧೫ರ ವರೆಗೆ ಈ ವಿಧೇಯಕದ ಅಂಗವಾಗಿರಂತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೧೫ರ ವರೆಗಿನ ಖಂಡಗಳು ಈ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಖಂಡ–೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.....

''ಮೊದಲನೆಯ ಖಂಡ ದೀರ್ಘ ಶೀರ್ಷಿಕೆಯ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯು ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆಯ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂವಿಧೆಯು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.....

೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದಂತೆ ಅಂಗೀಕರಿಸಲ್ಪಟ್ಟಿತು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಮನವಿ

ಕೋರಮಂಗಲದಲ್ಲಿ ಒಂದು ಸಾವಿರ ಬಡವರ ಮನೆಗಳು ಸುಟ್ಟು ಹೋಗಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮತ್ತೊಂದು ತಿದ್ದುಪಡಿ ಮಸೂದೆಯನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ನಿನ್ನೆ ಬೆಂಗಳೂರು ನಗರದಲ್ಲಿ ಒಂದು ದೊಡ್ಡ ಅನಾಹುತವಾಗಿದೆ. ಕೋರಮಂಗಲದಲ್ಲಿ ೧ ಸಾವಿರ ಬಡ ಜನರ ಮನೆಗಳು ಸುಟ್ಟುಹೋಗಿವೆ. ಇವತ್ತು ಕೆಲವರು ಅಲ್ಲಿಗೆ ಹೋಗಿ ಬಂದಿದ್ದಾರೆ. ವಿಶೇಷವಾಗಿ ಬದುಕಲಿಕ್ಕೋಸ್ಕರವಾಗಿ ಉತ್ತರ ಕರ್ನಾಟಕದಿಂದ ಕೂಲಿ ಕೆಲಸಕ್ಕಾಗಿ ಬಂದಂತಹ ಹೆಚ್ಚಿನ ಜನರು ಇದ್ದಾರೆ. ಬೇರೆ ಕಡೆಗಳಲ್ಲಿ ಕೆಲಸ ಮಾಡತಕ್ಕವರು ಮನೆಗಳನ್ನು ಕಟ್ಟಿಕೊಂಡು ಅಲ್ಲಿ ವಾಸ ಮಾಡುತ್ತಿದ್ದರು. ಅವರೆಲ್ಲರೂ ಸಣ್ಣ ಪಂಕ್ಕಳನ್ನು ಕಳೆದುಕೊಂಡಿದ್ದಾರೆ. ಆಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಗಿರತಕ್ಕ ಅನಾಹುತಕ್ಕೆ ಏನಾದರೂ ಒಂದು ಪರಿಹಾರವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಬಡವರು ಮತ್ತೆ ಏನನ್ನು ಕೇಳುವುದಿಲ್ಲ. ದೊಡ್ಡ ದೊಡ್ಡ ಕಟ್ಟಡಗಳನ್ನು ಹೊಡೆದು ಹಾಕಿದರೆ ದೊಡ್ಡವರಿಗೆ ಪರಿಹಾರ ಕೊಡುತ್ತೇವೆಂದು ಹೇಳುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಿನ್ನೆ ಅನಾಹುತ ಆಗಿರುವುದು ನಿಜ. ನಿನ್ನೆ ಅದು ಗೊತ್ತಾದ ಕ್ಷಣ ಆ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀನಿವಾಸ್‌ರವರು ಮತ್ತು ಗೃಹ ಸಚಿವರು ತಕ್ಷಣ ಅಲ್ಲಿಗೆ

ಹೋಗಿ ನೋಡಿಕೊಂಡು ಬಂದಿದ್ದಾರೆ. ೬೦೦-೧೦೦೦ ಗುಡಿಸಲುಗಳು ಸುಟ್ಟು ಹೋಗಿವೆ ಎಂದರೆ ಅದು ಸ್ವಲ್ಪಮಟ್ಟಿಗೆ ಅತಿಶಯೋಕ್ತಿಯಾಗುತ್ತದೆ. ಆದರೆ ನೂರಾರು ಜನ ನಿರ್ಗತಿಕರಾಗಿದ್ದಾರೆ, ಇದು ನಿಜ. ನಿನ್ನೆ ರಾತ್ರಿ ನಮ್ಮ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಯವರು ಮಧ್ಯರಾತ್ರಿ ವರೆಗೂ ಅಲ್ಲಿಯೇ ಇದ್ದರು. ಅವರಿಗೆ ಊಟ, ಮಲಗಲಿಕ್ಕೆ ಹಾಲುಕೊಡತಕ್ಕಂಥ ವ್ಯವಸ್ಥೆ ಮಾಡಿದ್ದರು. ಕಾರ್ಪೊರೇಷನ್ನಿನ ಎಲ್ಲಾ ಅಧಿಕಾರಿಗಳೂ ಇದ್ದರು. ಕಾರ್ಪೊರೇಷನ್ ಕಮೀಷನ್ನರೂ ಇದ್ದರು. ಇವತ್ತು ಪ್ರಧಾನ ಮಂತ್ರಿಗಳು ಬಂದಾಗ, ಸ್ವಾಭಾವಿಕವಾಗಿ ಶ್ರೀ ಆಸ್ಕರ್ ಫರ್ನಾಂಡೀಸ್ ಅವರು ಇದನ್ನು ಹೇಳಿದರು ಎಂದು ಕಾಣುತ್ತದೆ. ಮಾನ್ಯ ಪ್ರಧಾನ ಮಂತ್ರಿಗಳು ಭೇಟಿಗೆ ಹೊಡಲು ಕೇಳಿದ್ದರು. ಈ ರೀತಿಯ ದುರ್ಘಟನೆ ಆಗಿದೆಯಂತೆ, ಹೋಗಬೇಕು ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ ''ಹೋಗತಕ್ಕದ್ದು ಸರಿಯಲ್ಲ. ಅಂತಹ ದೊಡ್ಡ ಅನಾಹುತ ಏನೂ ಆಗಿಲ್ಲ. ಭೂಕಂಪ ಆಯಿತು, ಸಹಸ್ರಾರು ಜನ ಸತ್ತು ಹೋಗಿಬಿಟ್ಟರು ಎಂದರೆ ಸರಿ. ಆದ್ದರಿಂದ ಹೋಗತಕ್ಕಂಥ ಆಗತ್ಯ ನನಗೆ ಕಾಣುವುದಿಲ್ಲ'' ಎಂದು. ಆಗ ಅವರು ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಿ ಎಂದು ಹೇಳಿದರು. ನಾವು ಸ್ವಲ್ಪ ಕೊಡುತ್ತೇವೆ, ತಾವು ತಮ್ಮ ಪ್ರಧಾನ ಮಂತ್ರಿಗಳ ರಿಲೀಫ್ ಫಂಡ್‌ನಿಂದ ಸ್ವಲ್ಪ ಕೊಡಿ ಎಂದು ಹೇಳಿದ್ದಕ್ಕೆ ಕೊಡುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇಲ್ಲಿ ಏನು ಅನಾಹುತ ಆಗಿದೆ, ಎಷ್ಟು ಜನ ನಿರ್ಗತಿಕರಾಗಿದ್ದಾರೆ ಇದರ ಬಗ್ಗೆ ವಿವರವಾಗಿ ಪತ್ರ ಬರೆಯುತ್ತೇನೆ ಎಂದು ಹೇಳಿದ್ದೇನೆ. ಮತ್ತು ಅವರಿಗೆ ಬೇರೆ ಕಡೆಗೆ ಹೊಸದಾಗಿ ಮನೆಗಳನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡುವುದೂ ಇದೆ. ಐದುನೂರು ರೂಪಾಯಿ ಕೊಟ್ಟರೆ ಅದು ಅವರಲ್ಲಿ ಶಾಶ್ವತವಾಗಿ ಉಳಿಯುವುದಿಲ್ಲ. ಅದಕ್ಕಾಗಿ ಜಾಗ ಹುಡುಕಿ ಮಂಜಿ ಹೆಂಚಿನ ಮನೆಯನ್ನೇ ಮಾಡುವುದು ಸಾಧ್ಯವೇ ಎಂದು ಯೋಚನೆ ಮಾಡಿ ಒಂದು ಸಣ್ಣ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ತಾತ್ಕಾಲಿಕವಾಗಿ ಅವರಿಗೆ ವ್ಯವಸ್ಥೆ ಮಾಡಿ. ಟ್ರಾನ್ಸಿಟ್ ಕ್ಯಾಂಪ್ ರೀತಿಯಲ್ಲಾದರೂ ತಾವು ಮಾಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.--ತಾತ್ಕಾಲಿಕವಾದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶಾಸನ ರಚನಾ ಕಲಾಪಗಳು

೧೯೮೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

MR. SPEAKER.—Now Smt. Muktharunnisa will commence.

SMT. MUKTHARUNNISA (Narasimharaja).— Respected spaker Sir in page 5, it has been mentioned in Item-7 under column 3 and 4 for the figures 135 rupees 275 rupees. For this, it is enhanced to Rs. 675 and Rs. 1375. This is one, and on page 13 it has mentioned here that

> ''Motor Vehicles plying for hire or reward used for transport of person in respect of which permits have been issued under Section 63 of the Motor Vehicles Act, 1939, and permitted to carry more than twelve persons excluding the driver for every person which the vehicle is permitted to carry''